ಅಪಹಾಸ್ಯ ಆಗಿಬಿಡುತ್ತೆ. ಆದ್ರೆ ಬುಲೆಟ್ ನಗಿಸೋ ಮ್ಯಾನರಿಸಂ ಅನ್ನು ಕರಗತ ಮಾಡ್ಕೊಂಡಿದ್ರು. ಪ್ರೇಕ್ಷಕರಿಗೆ ಇವರನ್ನ ನೋಡಿದ್ ತಕ್ಷಣಾನೇ ನಗು ಬಂದ್ಬಿಡೋದು.

ಸಾಮಾನ್ಯವಾಗಿ ನಟರು, ಹಾಸ್ಯ ನಟರು ಕ್ಯಾಮೆರಾ ಮುಂದೇನೇ ಒಂಥರ, ಹೊರಗಡೇನೇ ಒಂಥರ – ನಾಣ್ಯದ ಎರಡು ಮುಖದ ರೀತಿ ಇರ್ತಾರೆ. ಆದ್ರೆ ಬುಲೆಟ್ ಎರಡೂ ಕಡೆ ಒಂದೇ ಥರ ಇದ್ದಂತವ್ರು. ಕ್ಯಾಮೆರಾ ಇರಲಿ ಬಿಡಲಿ, ಅವರು ಬದಲಾಗ್ತಿರ್ಲಿಲ್ಲ. ನಗುನಗುತ್ತಾ, ಕೀಟಲೆ ಮಾಡ್ಕೊಂಡು, ರೇಗಿಸ್ಕೊಂಡು ಹೀರೊ, ಹೀರೊಯಿನ್‌ಗಳು ಇವರನ್ನ ರೇಗಿಸಿದ್ರೆ ನಗಾಡ್ಕೊಂಡು ಲಾಫಿಂಗ್ ಬುದ್ಧನ ರೀತಿ ಇರೋವ್ರು.

ಕಾಟನ್ ಪೇಟೆ ಸೂಪರ್ ಟಾಕೀಸಿನ ಓಣಿಯಲ್ಲಿ ಬೆಳೆದ ಹುಡುಗನಾದ್ದರಿಂದ ಕನ್ನಡದ ಜೊತೆ ತೆಲುಗು, ತಮಿಳು, ಹಿಂದಿ ಭಾಷೆಗಳನ್ನು ನಿರರ್ಗಳವಾಗಿ ಮಾತನಾಡುತ್ತಿದ್ದರು. ಭಾಷೆಯ ಹಿಡಿತ ಚೆನ್ನಾಗಿದ್ದಿದ್ದರಿಂದ ನಿರ್ದೇಶಕರು ಯಾವುದೇ ಭಾಷೆಯವರಾಗಿದ್ದರೂ ಸರಿ ಅವರಿಗೆ, ಅವರು ಬರೆದ ಪಾತ್ರಕ್ಕೆ ಬುಲೆಟ್ ಹೊಂದಿಕೊಂಡು ಬಿಡುತ್ತಿದ್ದರು. ಕಮರ್ಷಿಯಲ್ ಆ್ಯಕ್ಷನ್ ಸಿನಿಮಾಗಳಲ್ಲಿ ವ್ಯಾಪಾರಿ ದೃಷ್ಟಿಯಿಂದ ಇವರ ಉಪಸ್ಥಿತಿ ಇರಲೇಬೇಕಾಗಿತ್ತು. ಹಲವು ಹೀರೊಗಳ ಪ್ರತೀ ಸಿನಿಮಾದಲ್ಲೂ ಕಾಯಂ ಆಗಿ ಇವರಿಗೊಂದು ಪಾತ್ರ ಇರೋದು.

'ಇಷ್ಟು ದೊಡ್ಡ ಹೆಸರು ಸಂಪಾದನೆ ಮಾಡಲಿಕ್ಕೆ ಅವರಿಗೆ ಹೇಗೆ ಸಾಧ್ಯ ಆಯ್ತು?' ಅಂತ ಅವರ ಸ್ನೇಹಿತರನ್ನು ಕೇಳಿದಾಗ ಸಿಕ್ಕ ಉತ್ತರ, 'ಬುಲೆಟ್‌ನ ಫ್ರೆಂಡ್ಲಿ ನೇಚರ್ ಮತ್ತು ಹೆಲ್ಪಿಂಗ್ ನೇಚರ್'. ಸಿನಿಮಾದ ಟೀ ಕೊಡೋ ಹುಡುಗನಿಂದ ಹಿಡಿದು ನಟ ನಟಿ, ಸಹಾಯಕ, ನಿರ್ದೇಶಕ, ನಿರ್ಮಾಪಕ – ಹೀಗೆ ಪ್ರತಿಯೊಬ್ಬರನ್ನೂ ಪರಿಚಯ ಮಾಡ್ಕೋಳೋದು, ಮನಸ್ಸಿಂದ ಮಾತನಾಡಿಸುವುದು ಅವರ ಗುಣ. ಪರಿಚಯ ಮಾಡ್ಕೊಂಡು ಅಲ್ಲಿಗೇ ಬಿಡ್ತಿರ್ಲಿಲ್ಲ, ಆ ಸ್ನೇಹ ಸಂಬಂಧವನ್ನು ಬೆಳೆಸ್ಕೊಂಡು ಹೋಗ್ತಿದ್ರು. ಸಹ ನಿರ್ದೇಶಕರುಗಳ ಪ್ರತಿಭೆ ಗುರುತಿಸಿ ಅವರುಗಳಿಗೆ ನಿರ್ಮಾಪಕರನ್ನು ಹುಡುಕಿಕೊಟ್ಟು, ಅವರು ನಿರ್ದೇಶಕನಾಗೋಕೆ ಸಹಾಯ ಮಾಡ್ತಿದ್ರು. ತಾನು ದೊಡ್ಡ ನಟ ಅನ್ನೋ ಯಾವುದೇ ಅಹಂ ತೋರದೆ ನಿರ್ದೇಶಕರುಗಳಿಗೆ ಪಾತ್ರ ಕೊಡುವಂತೆ ಕೇಳುವುದು, ಪರಿಚಯಸ್ಥರು ಯಾರೇ ಆಗಿರಲಿ, ತೊಂದರೆಯಲ್ಲಿದ್ದರೆ ಅವರಿಗೆ ಆರ್ಥಿಕವಾಗಿ ಸಹಾಯ ಮಾಡಿ ಕೈಹಿಡಿಯುವುದು – ಹೀಗೆ ಸರಳವಾಗಿದ್ದುಕೊಂಡೇ ಜನರ ಮನಸ್ಸು ಗೆದ್ದವರು ಅವರು.

ಬುಲೆಟ್ ಭೋಜನ ಪ್ರಿಯ. ಅದರಲ್ಲೂ ಮಾಂಸಹಾರ ಇಲ್ಲ ಅಂದ್ರೆ ಶೂಟಿಂಗ್ ಸೆಟ್ಟಲ್ಲಿ ಗಲಾಟೇನೇ ಮಾಡ್ಬಿಡೋವ್ರು. ಇಂಥದ್ದು ತಿನ್ಬೇಕು ಅನಿಸಿದ್ರೆ, ಮಗು ಥರ ಹಟ ಮಾಡಿ ತರಿಸ್ಕೊಂಡು ತಿನ್ನೋವ್ರು; ಜೊತೆಗಿರೋವ್ರಿಗೆ ತಿನ್ಸೋವ್ರು. ತಿನ್ಸಿಲ್ಲ ಅಂದ್ರೆ ಮುನಿಸ್ಕೊಂಡು ಬಿಡೋವ್ರು.

ಸಿನಿಮಾ, ನಟನೆ, ನಿರ್ಮಾಣ, ಮನೆ, ಮಡದಿ, ಮಕ್ಕಳು, ರಾಜಕೀಯ ಇಷ್ಟನ್ನೂ ನೋಡಿಕೊಳ್ಳುತ್ತಿದ್ದ ಬುಲೆಟ್ ಬರುಬರುತ್ತಾ ತನ್ನನ್ನು ತಾನು ನೋಡಿಕೊಳ್ಳುವುದನ್ನು ಮರೆತಿದ್ದರು. ಹಗಲು ರಾತ್ರಿಯೆನ್ನದೇ ಶೂಟಿಂಗ್‌ನಲ್ಲಿರುತ್ತಿದ್ದರು. ಅನಿಯಮಿತ ಆಹಾರ, ಅಪರಿಮಿತ ಮದ್ಯ, ವಿಪರೀತವೆನ್ನುವಷ್ಟು ಸ್ನೇಹಿತರು, ಅವರಿಗೆ ತಿನ್ನಿಸುವ ಕುಡಿಸುವ ಆತಿಥ್ಯದ ಚಟ ಬೇರೆ ಇತ್ತು. ಮದುವೆ, ಮುಂಜಿ, ನಾಮಕರಣ, ಬರ್ತ್‌ಡೇ ಪಾರ್ಟಿಗಳು, ರಾಜಕೀಯದ ಮೀಟಿಂಗ್‌ಗಳು ಹೀಗೆ ಸಾಲು ಕಾರ್ಯಕ್ರಮಗಳ ಮಧ್ಯ ಬುಲೆಟ್ ಅವರ ಜೀವನಕ್ರಮ ಹಳಿ ತಪ್ಪಿತ್ತು. ನಿರ್ಮಿಸಿದ ಸಿನಿಮಾಗಳು ಹಣವನ್ನು ತಂದುಕೊಡಲಿಲ್ಲ; ಬದಲಾಗಿ ಅನಾರೋಗ್ಯವನ್ನು ತಂದಿಕ್ಕಿತು. ಸಕ್ಕರೆ ಕಾಯಿಲೆ ಉಲ್ಬಣಗೊಂಡು ಕಾಲಿನ ಮೂರು ಬೆರಳನ್ನು ತೆಗೆಯದೇ ವಿಧಿಯಿಲ್ಲವೆಂದು ವೈದ್ಯರು ಹೇಳಿದ್ದರು. ಆಪರೇಷನ್ ಮಾಡಿಸಿಕೊಂಡು ಮನೆಗೆ ಮರಳಿದರು.

ಆಗ ಗಾಂಧಿನಗರದಲ್ಲಿ ಅವರ ಕುರಿತು ಬೇರೆ ಬೇರೆ ಸುದ್ದಿಗಳು ಹರಡಲು ಶುರುವಾಗಿದ್ದವು. 'ಬುಲೆಟ್ ಇನ್ಮೇಲೆ ಅಷ್ಟೇನಂತೆ', 'ಬೆರಳು ತೆಗೆದುಬಿಟ್ಟಿದಾರಂತೆ', 'ನಡೆಯಕ್ಕಾಗಲ್ವಂತೆ', 'ನೈಟ್ ಶೂಟಿಂಗ್ ಮಾಡಲ್ವಂತೆ', 'ರೈನ್ ಎಫೆಕ್ಟ್ ಆಗಲ್ವಂತೆ' ಎಂಬಿತ್ಯಾದಿ ಸುಳ್ಳುಸುದ್ದಿಗಳು, ಎಲ್ಲೆಡೆ ಹರಿದಾಡಲು ಶುರು ಆಗಿದ್ದವು. ನಿರ್ದೇಶಕರು, 'ರಿಸ್ಕ್ ಯಾಕೆ' ಅಂತ ಬುಲೆಟ್ ಜಾಗದಲ್ಲಿ ಬೇರೆ ನಟರನ್ನು ಹುಡುಕಲು ಶುರು ಮಾಡಿದರು.



ಅಷ್ಟೊತ್ತಿಗಾಗಲೇ ಟೀವಿ ಚಾನಲ್‌ಗಳಲ್ಲಿ 'ಕಾಮಿಡಿ ಕಿಲಾಡಿಗಳು', 'ಕಾಮಿಡಿ ಸರ್ಕಸ್' ಮುಂತಾದ ಪ್ರೋಗ್ರಾಮುಗಳಿಂದ ಕಲಾವಿದರ ದಂಡೇ ಹೊರಬಂದು ಅವಕಾಶಕ್ಕಾಗಿ ಕಾಯುತ್ತಿತ್ತು. ಪಾತ್ರಗಳು ಅವರ ಪಾಲಾದವು.

ಬುಲೆಟ್ ಇಲ್ಲಿಗೆ ಸೋಲೊಪ್ಪಿಕೊಳ್ಳಲಿಲ್ಲ. ಜಿದ್ದಿಗೆ ಬಿದ್ದು ದೇಹದ ತೂಕವನ್ನು ಇನ್ನಿಲ್ಲದಂತೆ ಇಳಿಸಿಕೊಂಡು ತಮ್ಮನ್ನು ತಾವು ಸ್ಪರ್ಧೆಗೆ ಒಡ್ಡಿಕೊಂಡರು. ಆದರೆ ಸಮಯ ಮೀರಿತ್ತು. ಮನಸ್ಸು ಆರೋಗ್ಯದ ಕಡೆ, ದೇಹ ಅನಾರೋಗ್ಯದ ಕಡೆ ಸೇರಿಕೊಂಡು ಬುಲೆಟ್‌ರನ್ನು ಹಿಂಡಿ ಆಸ್ಪತ್ರೆಯ ಹಾಸಿಗೆಯ ಮೇಲೆ ಮಲಗಿಸಿಬಿಟ್ಟಿತ್ತು. ಕೂತು ತಿಂದರೆ ಕೊಪ್ಪರಿಗೆ ಹೊನ್ನು ಕರಗುತ್ತದೆ, ಇನ್ನು ಅನಾರೋಗ್ಯದಿಂದ ಆಸ್ಪತ್ರೆಯಲ್ಲಿ ಮಲಗಿದರೆ ಕರಗದಿರುತ್ತದೆಯೇ? ಮನೆಯಲ್ಲಿ ದುಃಖ ಮಡುಗಟ್ಟಿತು. 'ಊರವರನ್ನೆಲ್ಲಾ ನಗಿಸುತ್ತಿದ್ದವನು ನನ್ನವರನ್ನೇ ಅಳಿಸುತ್ತಿದ್ದೀನಲ್ಲ' ಎಂದು ಬುಲೆಟ್ ಪ್ರತಿಕ್ಷಣ ತನ್ನನ್ನು ತಾನು ಶಪಿಸಿಕೊಳ್ಳಲಾರಂಭಿಸಿದರು. ಪಾದದಿಂದ ಪ್ರಾರಂಭವಾದ ನೋವು ದೇಹವನ್ನೆಲ್ಲಾ ಬಾಧಿಸತೊಡಗಿತು.

ಬಾಲನಟ, ಪ್ರೊಡಕ್ಷನ್ ಬಾಯ್, ನಟ, ಹಾಸ್ಯನಟ, ನಾಯಕ, ನಿರ್ಮಾಪಕ , ಪಕ್ಷದ ಕಾರ್ಯಕರ್ತ – ಹೀಗೆ ಬಹುರೂಪಿಯಾಗಿ ಸಫಲವಾಗಿದ್ದ ಬುಲೆಟ್ ಪ್ರಕಾಶ್ ಆಸ್ಪತ್ರೆಯಲ್ಲಿ ಬಹುಅಂಗಾಂಗ ವೈಫಲ್ಯದಿಂದ ಅಸುನೀಗಿದರು. ಸದಾ ಸ್ನೇಹಿತರು, ಸಂಬಂಧಿಕರು, ಅಭಿಮಾನಿಗಳ ಗುಂಪಿನಲ್ಲಿಯೇ ಕಾಣುತ್ತಿದ್ದ ಅವರ ಅಂತ್ಯಸಂಸ್ಕಾರ ಮಾತ್ರ ಕೆಲವೇ ಆಪ್ತರ ಉಪಸ್ಥಿತಿಯಲ್ಲಿ ಜರುಗಿದ್ದನ್ನು ವಿಪರ್ಯಾಸ ಎನ್ನದೇ ವಿಧಿಯಿಲ್ಲ.

ಬುಲೆಟ್ ಬೈಕ್ 350 ಸಿ.ಸಿ. ಇಂದ ಶುರುವಾಗುತ್ತದೆ; ಚಂದನವನದ ಬುಲೆಟ್ ಸಹ ತನ್ನ ಸಿನಿಪ್ರಯಾಣವನ್ನು 350 ಆಸುಪಾಸಿನ ಸಿನಿಮಾಗಳಿಗೇ ಅಂತ್ಯಗೊಳಿಸಿದ್ದು ಕಾಕತಾಳೀಯವೇ ಸರಿ.

ಚಿತ್ರಗಳು: ಕೆ.ಎನ್. ನಾಗೇಶ್ ಕುಮಾರ್



ನಟ ದರ್ಶನ್ ಜೊತೆ ಬುಲೆಟ್ ಪ್ರಕಾಶ್